ವಿ. ಹೇಮಂತಕುಮಾರ್, ಬೆಂಗಳೂರು
ಹೆಣ್ಣು ಸಂಸಾರದ ಕಣ್ಣು. ಗಂಡು?



ಅದರ ಹೊರವಲಯದಲ್ಲೇ ಇರುವ ಐಲೈನರ್.

ಬಾ.ರಂ. ಸುರೇಶ್, ಶಿವಮೊಗ್ಗ
ಹೆಣ್ಣು ಹೆಣ್ಣನ್ನು ವರಿಸಿದರೆ ಅವರ ಬದುಕು, ಮಕ್ಕಳುಮರಿ ಹೇಗೆ? ಮುಂದೇನು?
ಬಾಲವಿಧವೆಯರಿಗಿಂತ ಕೆಟ್ಟ ಬದುಕೇನಿರಲಾರದು.

ಬಿ.ಸಂ. ಸುಬ್ಬಣ್ಣ, ಬೆಂಗಳೂರು
ಗ್ರಹಣಕ್ಕೂ, ಗ್ರಹಚಾರಕ್ಕೂ ಏನಾದರೂ ಸಂಬಂಧವಿದೆಯೆ?
‘ಇದೆ. ಪಾಣಿ–ಗ್ರಹಣ ಗ್ರಹಚಾರದ ಫಲವೇ’ ಎಂದನಾ ಹೆನ್‌ಪೆಕ್ಡು.

ಪಿ. ಜಯವಂತ ಪೈ, ಕುಂದಾಪುರ
ಆನೆಗೂ, ಆಮೆಗೂ ವ್ಯತ್ಯಾಸವೇನು?



ಆನೆ ಜಿಮ್‌ಬಾಯ್‌ನಂತೆ; ತನ್ನ ತೂಕದ ಶೇ. 30 ಹೊರಬಲ್ಲದು; ಆಮೆ ಶ್ರಮಜೀವಿಯಂತೆ; 200 ಪಟ್ಟು ಹೊರಬಲ್ಲದು.

ರತ್ನಜ, ಮೈಸೂರು
ಸೀರಿಯಲ್ ನೋಡುವ ಹುಚ್ಚು ಬಿಡಿಸುವ ಉಪಾಯವೇನಾದರೂ ಇದೆಯೆ?
ಹೂಂ. ಟ್ವಿಟರ್, ಎಫ್‌ಬಿ ಹುಚ್ಚು ಹಿಡಿಸಿಬಿಡಿ.

ಎನ್. ವೈದೇಹಿ, ಮೈಸೂರು
ಕರ್ನಾಟಕದಲ್ಲಿ ಕನ್ನಡಿಗರಿಗೆ ಮಾತ್ರ ಉದ್ಯೋಗ, ನಿವೇಶನ ಮತ್ತು ವಾಸ್ತವ್ಯವೆಂಬ ಕಾನೂನು ಇದ್ದಿದ್ದರೆ?
ಕನ್ನಡನಾಡು ಔದಾರ್ಯದ ಬದಲು ಸ್ವಾರ್ಥಕ್ಕೆ, ಸಂಕುಚಿತತೆಗೆ ಹೆಸರಾಗುತ್ತಿತ್ತು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ನಿಜವಾಗಿಯೂ ನಿಜ ನಮಗೆ ನಿಜದಂತೆ ಕಾಣುವುದೇ ಇಲ್ಲ ಅಲ್ವಾ ಸಾರ್?
ಯಾವುದು ಯಾವುದಲ್ಲವೋ ಅದರಂತೆ ಬಿಂಬಿಸುವ ಜಾಹೀರಾತು ದುನಿಯಾದ ಪ್ರಭಾವ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಆದರ್ಶವಾದಿ ಕಷ್ಟ ಅನುಭವಿಸಬೇಕು. ಮಾನವಂತ ಮೌನವಾಗಿರಬೇಕು. ಬುದ್ಧಿವಂತ...?
ಮುಂದುವರಿಯದ ದಡ್ಡನಂತಿದ್ದು ಸವಲತ್ತುಗಳನ್ನು ಅನುಭವಿಸಬೇಕು.

ಮಲ್ಲಿಕಾರ್ಜುನ, ಸುರಧೇನುಪುರ
ದೊಡ್ಡ ವ್ಯಕ್ತಿಗಳು ತಾವು ಹುಟ್ಟಿ ಬೆಳೆದ ಊರನ್ನು ಕುಗ್ರಾಮ ಎನ್ನಲು ಕಾರಣವೇನು?
ಇಂತಹ ಕುಖ್ಯಾತನಿಗೆ ಜನ್ಮ ನೀಡಿದ ಗ್ರಾಮವಾದ್ದರಿಂದ ಅದು ಕುಗ್ರಾಮ ಆಯಿತಂತೆ.

ಬಿ.ಆರ್. ಉಷಾ, ಕೆನಡಾ
ಆಹ್ವಾನಪತ್ರಿಕೆಯಲ್ಲಿ ಉಡುಗೊರೆ ತರಬೇಡಿ ಎಂದು ಮುದ್ರಿಸಿ, ಕೊಟ್ಟರೆ ತೆಗೆದುಕೊಳ್ಳುವರಲ್ಲ?
ಅವರದು ತಮ್ಮ ಮನದಾಸೆಯನ್ನು ಧಿಕ್ಕರಿಸಿದವರನ್ನು ಧಿಕ್ಕರಿಸದಿರುವ ಸುಸಂಸ್ಕಾರ.

ಸಾವಿತ್ರಮ್ಮ ಕೆ. ವಿಭೂತಿ, ಹರಿಹರ
ನಮ್ಮ ನಿಮ್ಮೆಲ್ಲರ ಹಣೆಬರಹ ಬರೆಯುವ ವಿಧಾತನ ಹಣೆಬರಹ ಬರೆಯುವವರು ಯಾರು?
ಸರಸ್ವತಿ–ಜಗದ ಪ್ರತಿ ಗಂಡಿನ ಹಣೆಬರಹವನ್ನೂ ಅವನ ಸತಿಯೇ ಫ್ರೆಶ್ಶಾಗಿ ಬರೆಯುವುದು.

ರಾಜು ಎಸ್. ಗಾಲಿ, ಅಥಣಿ
ಕೊಲೆ, ದರೋಡೆ ಅತ್ಯಂತ ಸಹಜವಾಗಿರುವ ಇಂದಿನ ಜಗತ್ತಿನಲ್ಲಿ ಸಾಮಾಜಿಕ ಸ್ವಾಸ್ಥ್ಯಂ ಹದಗೆಟ್ಟಿದೆ. ಮುಂದೆ?
ನಾರದ ವನಚರಿಯಾಗಿದ್ದಾಗಲೇ ದರೋಡೆಕೋರನೂ ಇದ್ದ. ಒಳಿತುಕೆಡುಕುಗಳ ಸಹಜೀವನವೇ ಜಗತ್ತು.

ಶೃತಿ ರಿಗ್ರೆಟ್ ಐಯ್ಯರ್, ಅಮೆರಿಕಾ
ಅಲ್ಯೂಹಾಲಲ್ಲಿ ಹಾಲೆಷ್ಟು?
‘ಬಹುತ್ ಬುರಾ ಹಾಲ್ ಹೈ’ ಎಂದರು ವೈದ್ಯರು.

## ವಾರದ ಪ್ರಶ್ನೆ

ರಾಜೀವ ಎನ್. ಮಾಗಲ್, ಸಕಲೇಶಪುರ
ಗುರುಗಳೇ, ಶೇ. 40 ಸ್ವಲ್ಪ ಜಾಸ್ತಿ ಆಯ್ತಲ್ಲ?
ಅದು ಬೇರೆ ಸಮಯದಲ್ಲಿ. ಚುನಾವಣೆ ಸಮೀಪಿಸಿದೆ. ಶೇ. 50 ಮಾಡ್ಕೊಳ್ಳಿ ಪ್ಲೀಸ್...

ದಿನೇಶ್, ಗುಡ್ಡದೂರು
ಯೂಟ್ಯೂಬಿಗೂ, ವಾಹನದ ಟ್ಯೂಬಿಗೂ ಇರುವ ವ್ಯತ್ಯಾಸವೇನು?
ಯೂಟ್ಯೂಬ್ ಡೌನ್‌ಲೋಡ್ ಆದರೆ ಪಿಕ್ಚರ್. ವಾಹನದ ಟ್ಯೂಬ್ ‘ಡೌನ್‌ಲೋಡ್’ ಆದರೆ ಪಂಕ್ಚರ್.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು
ನನ್ನ ಪ್ರಶ್ನೆ ನಿಮಗೆ ಕಠಿಣವಾದಂತೆ ಕಾಣುತ್ತಿದೆಯಲ್ಲಾ?
ಕಾಣುವುದೆಲ್ಲ ನಿಜವಲ್ಲ ಎನ್ನುವುದಕ್ಕೆ ಇದು ಮತ್ತೊಂದು ಉದಾಹರಣೆ.

ವಿಜಯಕುಮಾರ್ ಎಚ್.ಕೆ. ರಾಯಚೂರು
ಶಾಲಾಕಾಲೇಜು ಪಠ್ಯಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ಗಿಡ ನೆಡುವುದನ್ನೇಕೆ ಕಡ್ಡಾಯಗೊಳಿಸಿಲ್ಲ?



ಗಿಡ ನೆಡುವುದಿರಲಿ, ಕುಂಡ ಇಡುವುದಕ್ಕೂ ಸ್ಥಳವಿಲ್ಲದ ಶಾಲೆಗಳಿರುವುದರಿಂದ.

ಕಾಳೀಹುಂಡಿ ಶಿವಕುಮಾರ್, ಮೈಸೂರು
ನಮ್ಮ ಬದುಕು ಬರಹ ಒಂದೇ ರೀತಿ ಇರುವುದಿಲ್ಲ. ಏಕೆ?
ಹ್ಯಾಂಡ್‌ರೈಟಿಂಗ್ ಬದಲಾಗುತ್ತದಲ್ಲ! ಬರಹ ನಮ್ಮದು; ಬದುಕನ್ನು ಸುತ್ತ ಇರುವವರು ಬರೆಯುತ್ತಾರೆ.

ಮಹಾವೀರ ಕಾಸರ, ಶಿವಮೊಗ್ಗ
ಅರವತ್ನಾಲ್ಕು ವಿದ್ಯೆಗಳಲ್ಲಿ ಒಂದಾದ ಕಳ್ಳತನವನ್ನು ಪಠ್ಯದಲ್ಲಿ ಸೇರಿಸಿದರೆ?
ಅಗತ್ಯವಿಲ್ಲ. ನಮ್ಮ ಪತ್ರಿಕೆಗಳು, ವಾಹಿನಿಗಳೇ ಕಳ್ಳತನದ ಕ್ರಮವನ್ನು ಇಂಚಿಂಚೂ ವರ್ಣಿಸುತ್ತವೆ.

■ ರಾಮ್